(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಒಬ್ಬ ಮಾನ್ಯ ಸದಸ್ಯರು: ವಾಟಾಳ್ ನಾಗರಾಜ್‌ರವರಿಗೆ ಮಹಿಳೆಯರಿಂದ ಏನೂ ಕಿಮ್ಮತ್ತು ಸಿಗಲಿಲ್ಲ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4994
ಸದಸ್ಯರ ಹೆಸರು : ಶ್ರೀಮತಿ ನಾಗಮಣಿ ಎಂ.ಕೆ. (ಕಿರುಗಾವಲು)
ಉತ್ತರ ದಿನಾಂಕ : 13–7–2005

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಕಿರುಗಾವಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಬಂದಿದೆ
ಆ.	ಈ ಕ್ಷೇತ್ರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ಇರುವ ಗ್ರಾಮಗಳ ಸಂಖ್ಯೆ ಎಷ್ಟು;	ಕಿರುವಾಗಲು ಕ್ಷೇತ್ರದ ಎಲ್ಲಾ ಗ್ರಾಮಗಳಿಗೂ ಕನಿಷ್ಠ ಒಂದು ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
ಇ.	ಎಷ್ಟು ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಲಾಗಿದೆ;	ಆದರೆ, ಸದರಿ ಕ್ಷೇತ್ರದ 47 ಗ್ರಾಮಗಳಲ್ಲಿ 40 ಎಲ್‌ಪಿಸಿಡಿಗಿಂತ ಕಡಿಮೆ ಪ್ರಮಾಣದಲ್ಲಿ ನೀರು ಪೂರೈಕೆಯಾಗುತ್ತಿದೆ. ಈ ಗ್ರಾಮ ಗಳಲ್ಲಿ ನೀರು ಪೂರೈಕೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಅಗತ್ಯ ಯೋಜನೆಗಳನ್ನು ಸಿದ್ಧಪಡಿಸಲಾಗಿದೆ.
ಈ	ಕುಡಿಯುವ ನೀರಿನ ಕೊರತೆ ಎದುರಿಸುತ್ತಿರುವ ಈ ಗ್ರಾಮಗಳಿಗೆ ವಿವಿಧ ಯೋಜನೆಯಲ್ಲಿ ಸಮರ್ಪಕವಾಗಿ ಕುಡಿಯುವ ನೀರಿನ ಸರಬರಾಜನ್ನು ಯಾವಾಗ ಒದಗಿಸಲಾಗುವುದು?	ಈಗಾಗಲೇ ಸಿದ್ಧಪಡಿಸಿದ ಕ್ರಿಯಾ ಯೋಜನೆಯ ಕಾಮಗಾರಿಗಳು ಅನುಷ್ಠಾನವಾಗಿ ಕಾರ್ಯಗತವಾದ ಕೂಡಲೇ ಎಲ್ಲಾ ಗ್ರಾಮಗಳಿಗೂ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆಯಾಗುತ್ತದೆ. ಇದಕ್ಕೆ ಸುಮಾರು ಎರಡು ವರ್ಷಗಳು ಬೇಕಾಗಬಹುದು.

ಶ್ರೀಮತಿ ಎಂ.ಕೆ. ನಾಗಮಣಿ: ಮಾನ್ಯ ಅಧ್ಯಕ್ಷರೆ, ಇಲ್ಲಿ ನಾನು ಕೊಟ್ಟಂಥ ಪ್ರಶ್ನೆಗೆ ಬಂದಿದೆ. 47 ಗ್ರಾಮಗಳಿಗೆ ಮಾಡಿದ್ದೇವೆ. ಇನ್ನು 40 ಗ್ರಾಮಗಳು ಬಾಕಿ ಇದೆ. ಮತ್ತೆ ಪೂರ್ತಿಗಾಗಿ ಪೂರೈಸಲು ಇನ್ನು 2 ವರ್ಷ ಬೇಕೆಂದು ಉತ್ತರ ಕೊಟ್ಟಿದ್ದಾರೆ. ನಾನು ಕೇಳುವುದು. ಇದೇ ಸದನದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಕುಡಿಯುವ ನೀರಿನ ವ್ಯವಸ್ಥೆಗೆ ಎಷ್ಟು ದುಡ್ಡು ಬೇಕಾದರೂ ಖರ್ಚು ಮಾಡುತ್ತೇವೆ. ಸರ್ಕಾರದಲ್ಲಿ ಹಣ ಇದೆ. ಟಾಸ್ಕ್‌ಫೋರ್ಸ್ ಕಮಿಟಿಯಲ್ಲಿ ಜಿಲ್ಲಾ ಆಡಳಿತಕ್ಕೆ ನಾನು ಆದೇಶ ಹೊರಡಿಸುತ್ತೇನೆಂದು ಇಲ್ಲಿ ಒಂದು ಹೇಳಿಕೆ ಮಾಡಿದರು. ಈ ಹೇಳಿಕೆ ಆದ ನಂತರ ಶಾಸಕರಾದ ನಾವು ಟಾಸ್ಕ್‌ಫೋರ್ಸ್ ಕಮಿಟಿ ಮಾಡುವುದಕ್ಕೋಸ್ಕರ ಅಲ್ಲಿರುವಂಥ ಇಒ ಇರಬಹುದು. ತಹಶೀಲ್ದಾರ್ ಇರಬಹುದು. ಇಬ್ಬರಿಗೂ ಹೇಳಿಯಾಯಿತು. ಇದುವರೆಗೂ ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಮದ್ದೂರು ತಾಲೂಕಿನಲ್ಲಿ ಮಾತ್ರ ಒಂದು ಒಂದು ಮೀಟಿಂಗ್ ಮಾಡಿದೆವು. ಮಳವಳ್ಳಿ ತಾಲೂಕಿನಲ್ಲಿ ಇದುವರೆಗೂ ಒಂದು ಟಾಸ್ಕ್‌ಫೋರ್ಸ್ ಕಮಿಟಿ ಕುಳಿತಿಲ್ಲ.

ಶ್ರೀಮತಿ ಎಂ.ಕೆ. ನಾಗಮಣಿ: ಒಂದು ಬೋರ್‌ವೆಲ್‌ನ್ನು ಕೂಡ ಕೊರೆಸಿಲ್ಲ. ಇದು ಶುದ್ಧ ಸುಳ್ಳಾಗಿದೆ. ನನ್ನ ಜೊತೆಗೆ ಮಾನ್ಯ ಸಚಿವರು ಬಂದರೆ ನಾನು ಖುದ್ದಾಗಿ ಕರೆದುಕೊಂಡು ಹೋಗಿ ಪ್ರತಿಯೊಂದು ಸ್ಥಳವನ್ನು ತೋರಿಸುತ್ತೇನೆ. ಒಂದು ಬೋರ್‌ವೆಲ್ ಕೊರೆದಿಲ್ಲ. 3 ಬೋರ್‌ವೆಲ್‌ಗಳನ್ನು ಕೊರೆದಿದ್ದಾರೆ. ಅದರಲ್ಲಿ 2 ಫೈಲ್ಯೂರ್ ಆಗಿದೆ. ಇವೆಲ್ಲವು ಆದನಂತರ ನಾನೇ ಖುದ್ದಾಗಿ ಮುಖ್ಯ ಕಾರ್ಯದರ್ಶಿಯವರ ಹತ್ತಿರ ಮಾತನಾಡಿ ಅದರ ಬಗ್ಗೆ ಒಂದು ಪಟ್ಟಿಯನ್ನು ತಯಾರು ಮಾಡಿ ಅವರ ಹತ್ತಿರ ಕಳುಹಿಸಿಕೊಟ್ಟಿದ್ದೇನೆ. ಮುಖ್ಯ ಕಾರ್ಯದರ್ಶಿಯವರು ಮಾಡುತ್ತೇನೆ ಹಾಗೂ ಹೇಳುತ್ತೇನೆ ಎಂದು ಇದುವರೆವಿಗೂ ಕೂಡಾ ಒಂದು ಬೋರ್‌ವೆಲನ್ನು ನನ್ನ ಕ್ಷೇತ್ರದಲ್ಲಿ ತೆಗೆದಿರುವುದಿಲ್ಲ. ಇ.ಒ. ರವರನ್ನು ಕೇಳಿದರೆ ಜಿಲ್ಲಾ ಪಂಚಾಯತ್ ಎ.ಇ.ಇ.ನಲ್ಲಿ ಹೇಳುತ್ತಾರೆ. ಎಇಇರವರನ್ನು ಕೇಳಿದರೆ ತಹಶೀಲ್ದಾರರಿಗೆ ಹೇಳುತ್ತಾರೆ. ಈ ತರಹದ ಪರಿಸ್ಥಿತಿಯಲ್ಲಿ ಶಾಸಕರು ಯಾವ ರೀತಿಯಾಗಿ ಕೆಲಸವನ್ನು ಮಾಡುವುದು. ಕುಡಿಯುವ ನೀರಿಗಾಗಿ ಹಾಹಾಕಾರ ಇರುವಂತಹ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರ ಯಾವ ರೀತಿ ನೀರಿನ ವ್ಯವಸ್ಥೆ ಮಾಡುತ್ತದೆ. ಎಂಬುದರ ಬಗ್ಗೆ ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಬಿ. ಸತ್ಯನಾರಾಯಣ: ಈಗಾಗಲೇ ಮಂಡ್ಯ ಜಿಲ್ಲೆ ಕಿರುಗಾವಲು ಕ್ಷೇತ್ರದಲ್ಲಿ 155 ಜನವಸತಿಗಳಿವೆ. ಈ ಕ್ಷೇತ್ರದಲ್ಲಿ ಗ್ರಾಮೀಣ ಜನತೆಗೆ ಕೊಳವೆ ನೀರು ಸರಬರಾಜು ಯೋಜನೆ 102 ಇದೆ. ಅದರಲ್ಲಿ 95 ಕೊರೆಸಿದ್ದೇನೆ. ಕಿರು ನೀರು ಸರಬರಾಜು 129 ಇದ್ದು. ಅದರಲ್ಲಿ 122 ಕಾರ್ಯನಿರ್ವಹಿಸುತ್ತಿವೆ. ಕೈಪಂಪು ಕೊಳವೆ ಬಾವಿ

1024 ಇದ್ದು, ಅದರಲ್ಲಿ 995 ಕಾರ್ಯನಿರ್ವಹಿಸುತ್ತಿದೆ. ಈ ಪ್ರಕೃತಿಯ ಅಂತರಜಲ ಮಟ್ಟ ಕಡಿಮೆಯಾಗಿ ಸುಮಾರು 47 ಗ್ರಾಮಗಳಲ್ಲಿ 40 ಎಲ್‌ಪಿಸಿಡಿ ಕಡಿಮೆ ನೀರು ಒದಗಿಸತಕ್ಕಂತಹ ಹಳ್ಳಿಗಳನ್ನು ನಾವು ಗುರುತಿಸಿದ್ದೇವೆ. ಈಗಾಗಲೇ ಈ 47 ಹಳ್ಳಿಗಳಿಗೆ 140 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪುನಶ್ಚೇತನ ಗೊಳಿಸುವಂತಹ ಯೋಜನೆಗಳನ್ನು ನಾವು ಹಾಕಿಕೊಂಡಿದ್ದೇವೆ. ಈ ಪೈಕಿ 17 ಕಾಮಗಾರಿಗಳು ತಾಲ್ಲೂಕು ಮಟ್ಟದ ಕಾರ್ಯಪಡೆಯ ಮುಖೇನ ಅನುಮೋದನೆ ನೀಡಲಾಗಿದ್ದು, ಆ ಕಾಮಗಾರಿಗಳು ಪೂರ್ಣಗೊಂಡಿವೆ. ಇನ್ನು 9 ಗ್ರಾಮಗಳಲ್ಲಿ ಕಾಮಗಾರಿಗಳು ಪೂರ್ಣಗೊಂಡಿದ್ದು, ವಿದ್ಯುತ್‌ಸಂಪರ್ಕ ಸಲುವಾಗಿ ಬಾಕಿ ಇದೆ. ಉಳಿದ ಮದ್ದೂರು ತಾಲೂಕಿನ 21 ಗ್ರಾಮಗಳಲ್ಲಿ ಕುಡಿಯಮ ನೀರು ಸರಬರಾಜು: ಕ್ರಿಯಾ ಯೋಜನೆಗೆ ತಾಲ್ಲೂಕು ಮಟ್ಟದ ಕಾರ್ಯಪಡೆ ಅನುಮೋದನೆ ನೀಡಿದೆ. ಇನ್ನುಳಿದ ಮಳವಳ್ಳಿ ತಾಲೂಕಿನ ಕುಡಿಯುವ ನೀರಿನ ಕ್ರಿಯಾಯೋಜನೆ ಅನುಮೋದನೆಗಾಗಿ ಬಾಕಿ ಇದೆ. ಹಾಗಾಗಿ ಈ ಮೇಲ್ಕಂಡ ಯೋಜನೆಗಳ ಜಿಲ್ಲಾಧಿಕಾರಿಗಳ ವತಿಯಿಂದ 6.39 ಲಕ್ಷ ರೂಪಾಯಿಗಳು ಹಾಗೂ ಜಿಲ್ಲಾ ಪಂಚಾಯತಿ ವತಿಯಿಂದ 42 ಲಕ್ಷ ರೂಪಾಯಿಗಳ ವೆಚ್ಚ ಖರ್ಚು ಮಾಡಿದ್ದೇವೆ. ಈ ಎಲ್ಲಾ ಯೋಜನೆಗಳ ಅನುಷ್ಠಾನ ಸದರಿ ಕಾಮಗಾರಿಗಳಿಗೆ ಕುಡಿಯುವ ನೀರಿನ ಪೂರೈಕೆಯ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇವರು ಟಾಸ್ಕ್‌ಫೋರ್ಸ್‌ನ್ನು ರಚನೆ ಮಾಡಿ ಎಂಎಲ್‌ಎಗಳು ಹೇಳಿದ ಕಡೆಗಳಲ್ಲಿ ಒಂದು ಆಗಿಲ್ಲವೆಂದು ಸದಸ್ಯರು ನಿಂತು ಕೊಂಡು ಮಾತನಾಡುತ್ತಿದ್ದಾರೆ. ನೀವು ಸಿ.ಇ.ಒ.ರವರನ್ನು ಕರೆದು ಹೇಳಬಾರದೇ? ಅವರು ಏತಕ್ಕಾಗಿ ಟಾಸ್ಕ್‌ಫೋರ್ಸ್ ಸಮಿತಿ ಅಧ್ಯಕ್ಷರಾಗಿರಬೇಕು? ಸನ್ಮಾನ್ಯ ಸಚಿವರೆ, ನಾನು ನಿಂತುಕೊಂಡು ನಾನು ಹೇಳಿದ್ದು ಒಂದು ಬೋರ್‌ವೆಲ್ ಹಾಕಲು ಆಗಿಲ್ಲವೆಂದರೆ ನಾನು ಏತಕ್ಕಾಗಿ ಶಾಸನಸಭೆಯಲ್ಲಿರಬೇಕು. ಇಲ್ಲಿ ನಿಂತುಕೊಳ್ಳುತ್ತೇವೆ. ಭಾಷಣ ಮಾಡುತ್ತೀರಿ ಎಷ್ಟಾದರೂ ಕೊರೆಸಿಕೊಳ್ಳಿ ದುಡ್ಡಿನ ಕೊರತೆಯಿಲ್ಲ ಹೇಳಿ ಒಬ್ಬರು ಲೇಡಿ ಮೆಂಬರ್ ನನ್ನ ಕ್ಷೇತ್ರದಲ್ಲಿ ಒಂದು ಆಗಲಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ ಇದರ ಬಗ್ಗೆ ನಿಮಗೆ ಜವಾಬ್ದಾರಿಯಿಲ್ಲವೇ? ಸಾರ್,

ಶ್ರೀ ಬಿ.ಸತ್ಯನಾರಾಯಣ: ಮಾಧುಸ್ವಾಮಿಯವರೆ, ತಾವು ತಮ್ಮ ಕ್ಷೇತ್ರದಲ್ಲಿ ಬೋರ್ ಕೊರೆಸಿಲ್ಲವೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಅದಕ್ಕಾಗಿ ಕೇಳುತ್ತಿದ್ದೇವೆ. ನಮ್ಮ ಕ್ಷೇತ್ರಗಳಲ್ಲಿ ಆಗಿದೆ.

ಶ್ರೀ ಬಿ. ಸತ್ಯನಾರಾಯಣ: ನಾವು ಕಾರ್ಯಪಡೆಯನ್ನು ಮಾಡಿ ನಿಮಗೆ ಆ ಅಧಿಕಾರವನ್ನು ಕೊಟ್ಟಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರ ಕ್ಷೇತ್ರದಲ್ಲಿ ಸಿ.ಇ.ಒ.ರವರು ಅಪ್ರೂವಲ್ ಕೊಡದಿದ್ದರೆ ಅವರು ಏನು ಮಾಡಬೇಕು?

ಶ್ರೀ ಬಿ. ಸತ್ಯನಾರಾಯಣ: ಸಿ.ಇ.ಒ.ರವರು ಅಪ್ರೂವೆಲ್‌ನ್ನು ಏತಕ್ಕಾಗಿ ಕೊಡುವುದಿಲ್ಲ. ಅವರು ಕೊಡುತ್ತಾರೆ. ನೀವು ಕೆಲಸ ಮಾಡಿಸಿ ಹಣಕಾಸಿನ ತೊಂದರೆಯಿಲ್ಲ. ನಾವು ಇಷ್ಟು ಹಣವನ್ನು ಖರ್ಚು ಮಾಡಿದ್ದೇವೆ; ಎಂದು ಬಾಯಿಬಿಟ್ಟು ಹೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸಿ.ಇ.ಒರವರು ಅಪ್ರೂವಲ್‌ನ್ನು ಕೊಡುತ್ತಿಲ್ಲ. ನನಗೂ ಕೂಡಾ ಅಪ್ರೂವಲ್‌ನ್ನು ಕೊಟ್ಟಿಲ್ಲ ಸಾರ್ ನಾನು ನಿಂತುಕೊಂಡು ತಮಗೆ ಹೇಳುತ್ತಿದ್ದೇನೆ.

ಶ್ರೀ ಬಿ. ಸತ್ಯನಾರಾಯಣ: ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಹಣಕಾಸಿನ ಸಚಿವರು ಕೂಡ ಹೇಳಿದ್ದಾರೆ. ನಾನು ಸಹ ಹೇಳಿದ್ದೇನೆ. ಹಣದ ತೊಂದರೆ ಬಂದರೆ ನಾವು ನೋಡಿಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು: ಈ ತರಹ ಎಲ್ಲರೂ ಒಟ್ಟಿಗೆ ನಿಂತುಕೊಳ್ಳಬಾರದು.

(ಗೊಂದಲ)

ಅಧ್ಯಕ್ಷರು: ಮಾನ್ಯ ಮಂತ್ರಿಗಳೆ, ಏನಪ್ಪಾ ಅಂದರೆ ಇಷ್ಟೊಂದು ಜನರು ನಿಂತು ಕೊಂಡು ಅವರವರ ಕ್ಷೇತ್ರದಲ್ಲಿರತಕ್ಕಂತ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಎದ್ದು ನಿಂತು ಕೊಂಡಿದ್ದಾರೆ. ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಬಹಳಷ್ಟು ಕ್ಷೇತ್ರದಲ್ಲಿ ಬಹಳಷ್ಟು ತಾಲೂಕುಗಳಲ್ಲಿ ಸಮಸ್ಯೆ ಇದೆ ಎಂದು ಅರ್ಥವಾಗುತ್ತದೆ. ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಎಲ್ಲರನ್ನೂ ಕರೆದು ತಾವು ಟಾಸ್ಕ್‌ಫೋರ್ಸ್ ಮಾಡಿದ್ದೀರಿ. ಅದರಲ್ಲಿ ಎಷ್ಟು ಆಗಿದೆ. ಏನು ಆಗಿದೆ. ಎಂಬುದರ ಬಗ್ಗೆ ಈ ಅಧಿವೇಶನದೊಳಗಡೆ ಒಂದು ಮೀಟಿಂಗ್ ಮಾಡಿ 3–4 ಜಿಲ್ಲೆಗಳ ಸದಸ್ಯರುಗಳನ್ನು ಕರೆದು ಮೀಟಿಂಗ್ ಮಾಡಬೇಕು. ಏನಾದರೂ ಒಂದು ಸಲ್ಯೂಷನ್ ಕಂಡು ಹಿಡಿಯಿರಿ.

ಶ್ರೀಮತಿ ಎಂ.ಕೆ. ನಾಗಮಣಿ: ಸನ್ಮಾನ್ಯ ಅಧ್ಯಕ್ಷರೆ, ನಾನು ಕೊಟ್ಟ ಖಚಿತ ಮಾಹಿತಿಯ ಪ್ರಕಾರ ಇಡೀ ಮಂಡ್ಯ ಜಿಲ್ಲೆಯಲ್ಲಿ ಪೂರ್ತಿ ಟಾಸ್ಕ್‌ಫೋರ್ಸ್ ಬಂದಿರುವುದು ಮತ್ತು ಕುಡಿಯು ನೀರಿನ ವ್ಯವಸ್ಥೆ ಆಗಿರುವುದು. ಕೆ.ಆರ್.ಪೇಟೆ, ನಾಗಮಂಗಲ, ಪಾಂಡವಪುರ 3 ಕ್ಷೇತ್ರಗಳನ್ನು ಬಿಟ್ಟು ಇನ್ನು ಎಲ್ಲೂ ಕೂಡ ಆಗಿಲ್ಲ. ಇದನ್ನು ನಾನು ಬೇಕಾದರೆ ಸಾಬೀತು ಮಾಡುತ್ತೇನೆ. ನಾನು ಹೋಬಳಿ ಎಂ.ಎಲ್.ಎ ಆದ್ದರಿಂದ ನನಗೆ ಎರಡು ತಾಲೂಕುಗಳು ಬರುತ್ತದೆ. ಆ ಕಡೆಗೆ ಮಾನ್ಯ ಸದಸ್ಯರಾದ

ಶ್ರೀ ತಮ್ಮಣ್ಣನವರದು ಬರುತ್ತದೆ. ಈ ಕಡೆಗೆ ಮಾನ್ಯ ಸದಸ್ಯರಾದ ಶ್ರೀ ಅನ್ನ ದಾನಿಯವರದು ಬರುತ್ತದೆ. ನನ್ನ ಅಧಿಕಾರಿಗಳು ಏನು ಮಾಡುತ್ತಾರೆಂದರೆ, ನನಗೆ ಬಂದಂತಹ ಸರ್ಕಾರದ ಆದೇಶವನ್ನು ಮುಚ್ಚಿಟ್ಟು, ಆ ಕಡೆಗೆ ಕೆಲಸ ಮಾಡುವಂತಹ ಒಂದು ವಿಪರ್ಯಾಸ ನನಗೆ ಒದಗಿದೆ. ದಯವಿಟ್ಟು ಮಾನ್ಯ ಸಚಿವರು ಜಿಲ್ಲೆಯಲ್ಲಿರುವಂತಹ ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟು ಅವರು ಕೊಟ್ಟಿರುವಂತಹ ಮಾಹಿತಿ ಪೂರ್ತಿ ಸುಳ್ಳಾಗಿದೆ. ಅವರು ದಯವಿಟ್ಟು ಸಹಕರಿಸಿ ಎಂದು ನನ್ನ ಜೊತೆ ಮಾತನಾಡಿದ್ದಾರೆ. ಇದು ಕೊಟ್ಟಿರುವಂತಹ ಮಾಹಿತಿ ಪೂರ್ತಿ ಸುಳ್ಳಾಗಿದೆ. ನನ್ನ ಜೊತೆ ಮಾನ್ಯ ಸಚಿವರು ಬರಲಿ, ನಾನು ನನ್ನ ಕ್ಷೇತ್ರಕ್ಕೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. 8 ಕೊಳವೆ ಬಾವಿಗಳನ್ನು ಕೊರೆದಿರುವುದು, ಅದರಲ್ಲಿ 3–4 ಫೈಲ್ಯೂರ್ ಆಗಿದೆ. ನನ್ನೊಟ್ಟಿಗೆ ಬಂದರೆ ನಾನು ತೋರಿಸುತ್ತೇನೆ. ಮಾನ್ಯ ಸಚಿವರು ದಯವಿಟ್ಟು ಗಮನಕೊಟ್ಟು ನಾನೊಬ್ಬಳು ಮಹಿಳಾ ಶಾಸಕಿಯಾಗಿದ್ದೇನೆ. ಅಲ್ಲಿರುವ ಸಂಬಂಧಪಟ್ಟ ಅಧಿಕಾರಿಗಳಿಗೆ ಅದೇಶವನ್ನು ಕೊಟ್ಟು ಕುಡಿಯುವ ನೀರಿನ ವ್ಯವಸ್ಥೆಗೆ ತಾವು ಬಹಳಷ್ಟು ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಿರಲ್ಲಾ.

ಅಧ್ಯಕ್ಷರು: ಆಯಿತಮ್ಮ, ಎಷ್ಟು ಸಾರಿ ಹೇಳಿದ್ದೇ ಹೇಳುತ್ತೀರಿ. ಮಾನ್ಯ ಸಚಿವರು ಇದರ ಬಗ್ಗೆ ಹೇಳಿ.

ಶ್ರೀ ಬಿ. ಸತ್ಯನಾರಾಯಣ: ಸಂಬಂಧಪಟ್ಟ ಸಿಇಒರವರ ಜೊತೆಗೆ ಇವತ್ತೆ ನಾನು ಮಾತನಾಡಿ ಅವರ ಕ್ಷೇತ್ರಕ್ಕೆ ವೈಯಕ್ತಿಕವಾಗಿ ತೊಂದರೆಯಾಗುತ್ತಿದೆ ಎಂಬ ಆರೋಪ ವನ್ನು ಮಾಡುತ್ತಿರುವುದರಿಂದ ನಾನು ತಕ್ಷಣವೇ ಇವತ್ತು ಸಿಇಒರವರ ಜೊತೆ ಮಾತನಾಡಿ ಸೂಕ್ತವಾಗಿ ತೊಂದರೆಯನ್ನು ಬಗೆಹರಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ:431 (5439)

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಸನ್ಮಾನ್ಯ ಸಭಾಧ್ಯಕ್ಷರೆ...

ಅಧ್ಯಕ್ಷರು: ಕೇಳುತ್ತಾರೆ, ಅವರು ಎಲ್ಲರನ್ನು ಕೇಳುತ್ತಾರೆ. ತಾವು ಕುಳಿತುಕೊಳ್ಳಿ. ಅವರು ಎಲ್ಲವನ್ನು ಮಾಡುತ್ತೇನೆಂದು ಒಪ್ಪಿಕೊಂಡಿದ್ದಾರೆ.

ಒಬ್ಬ ಮಾನ್ಯ ಸದಸ್ಯರು: ಅವರು ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಸದನದಲ್ಲಿ ಸುಮ್ಮನೆ ಸುಳ್ಳು ಹೇಳುತ್ತಿದ್ದಾರೆ. ಶಾಸಕರಿಗೆ ಅವಮರ್ಯಾದೆ ಮಾಡುತ್ತಿದ್ದಾರೆ. ಹಣವನ್ನು ತತ್‌ಕ್ಷಣ ಬಿಡುಗಡೆ ಮಾಡಬೇಕು.

ಶ್ರೀ ಎಂ.ಕೆ. ನಾಗಮಣಿ: ದಯವಿಟ್ಟು ಇದರ ಬಗ್ಗೆ ಎನ್‌ಕ್ವಯರಿ ಮಾಡಿಸಬೇಕು.